ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ: ಇಜಿ.1/ಸಿಆರ್-5/2018-19

ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ)ರವರ ಕಛೇರಿ,
1ನೇ ಮಹಡಿ, ವಾಣಿಜ್ಯ ತೆರಿಗೆಗಳ ಕಾರ್ಯಾಲಯ,
ಗಾಂಧೀನಗರ, ಬೆಂಗಳೂರು, ದಿನಾಂಕ: 21/10/2019

ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ: 05 /2019-20

ವಿಷಯ: ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಮತ್ತು ಇತರೆ ಎಲ್ಲಾ ಅಧಿನಿಯಮಗಳಡಿ ಖಜಾನೆ-2ರ ಮೂಲಕ ಆನ್‌ಲೈನ್ ಮರುಪಾವತಿ ಮಾಡುವ ಕುರಿತು.

*****

ಜುಲೈ 1, 2017ರಿಂದ ಸರಕು ಮತ್ತು ಸೇವಾ ತೆರಿಗೆ ಅನುಷ್ಠಾನಗೊಂಡಿದ್ದು ಕರ್ನಾಟಕ ಸರ್ಕಾರದ ಖಜಾನೆ ಇಲಾಖೆಗಳ ಸಮಗ್ರ ಹಣಕಾಸು ವ್ಯವಹಾರಗಳ ವ್ಯವಸ್ಥೆಯಡಿ ಖಜಾನೆ-2ರ ಮೂಲಕ ಸರಕು ಮತ್ತು ಸೇವಾ ತೆರಿಗೆಯ ಮರುಪಾವತಿಗಳನ್ನು ಏಪ್ರಿಲ್ 1, 2018ರಿಂದ ಯಶಸ್ವಿಯಾಗಿ ಕರದಾತರ ಬ್ಯಾಂಕ್ ಖಾತೆಗೆ ಜಮಾ ಮಾಡುವ ವ್ಯವಸ್ಥೆ ಕಾರ್ಯಗತಗೊಳಿಸಲಾಗುತ್ತಿದೆ. ದಿನಾಂಕ: 01/07/2017ರ ಮೊದಲು ಜಾರಿಯಲ್ಲಿದ್ದ ಕರ್ನಾಟಕ ಮೌಲ್ಯವರ್ಧಿತ ತೆರಿಗೆ, ಕೇಂದ್ರ ಮಾರಾಟ ತೆರಿಗೆ, ಕರ್ನಾಟಕ ವಿಲಾಸಿ ತೆರಿಗೆ, ಕರ್ನಾಟಕ ಮನರಂಜನಾ ತೆರಿಗೆ, ಜೂಜು ತೆರಿಗೆ, ಕರ್ನಾಟಕ ಪ್ರವೇಶ ತೆರಿಗೆಗಳು, ಸರಕು ಮತ್ತು ಸೇವಾ ತೆರಿಗೆಯಲ್ಲಿ ವಿಲೀನವಾಗಿವೆ. ಆದರೆ ಹಿಂದಿನ ವರ್ಷಗಳ ಕರನಿರ್ಧಾರಣೆಯಿಂದಾಗಿ, ಮೇಲ್ಮನವಿ ಪ್ರಾಧಿಕಾರವು ಹೊರಡಿಸಿದ ಆದೇಶದಿಂದಾಗಿ ಅಥವಾ ಕರದಾತರು ಆಯಾ ಅಧಿನಿಯಮಗಳಡಿಯ ಉಪಬಂಧಗಳಿಗನುಸಾರವಾಗಿ ಮರುಪಾವತಿಗೆ ಅರ್ಜಿ ಸಲ್ಲಿಸಿರುತ್ತಿರುತ್ತಾರೆ. ಅಂತಹ ಪ್ರಕರಣಗಳಲ್ಲಿ ಸಂಬಂಧಿತ ಕರನಿರ್ಧಾರಣಾಧಿಕಾರಿಗಳು ಅವರ ಅರ್ಜಿಗಳನ್ನು ಪರಿಶೀಲಿಸಿ ಅರ್ಹವಿದ್ದ ಪ್ರಕರಣಗಳಲ್ಲಿ ಮರುಪಾವತಿಗೆ ಆದೇಶ ಹೊರಡಿಸಿ ಏಜೆನ್ಸಿ ಬ್ಯಾಂಕ್ ಮುಖಾಂತರ ಮರುಪಾವತಿ ಆದೇಶ ಮತ್ತು ಬೆಂಗಳೂರಿನ ಮಹಾನಗರ ಪಾಲಿಕೆಯಲ್ಲಿರುವ ಕರದಾತರಿಗೆ ಸಂಬಂಧಪಟ್ಟಂತೆ ಚೆಕ್‌ಗಳನ್ನು ಸಹಿತ ನೀಡಿ ಏಜೆನ್ಸಿ ಬ್ಯಾಂಕ್‌ಗೆ ಹಣ ಮರುಪಾವತಿಗೆ Payment Advice ನೀಡುತ್ತಿದ್ದಾರೆ. ಪ್ರಸ್ತುತ ಖಜಾನೆ-2 ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ಮೂಲಕ ಕರದಾತರ ಬ್ಯಾಂಕ್ ಖಾತೆಗೆ NEFT/RTGS ಮೂಲಕ ಹಣ ಜಮಾ ಮಾಡುವ ವ್ಯವಸ್ಥೆಯನ್ನು ಕಾರ್ಯಗತಗೊಳಿಸಿದ್ದರಿಂದ ಈಗ ಪ್ರಸ್ತುತ ಜಾರಿಯಲ್ಲಿರುವ ಚೆಕ್ ಮೂಲಕ ಅಥವಾ ಮರುಪಾವತಿ ಆದೇಶ (Refund Advice) ಗಳ ಮುಖಾಂತರ ಬ್ಯಾಂಕ್‌ನಿಂದ ಹಣ ಮರುಪಾವತಿ ಮಾಡುವ ವಿಧಿವಿಧಾನವನ್ನು **ದಿನಾಂಕ: 25/10/2019ರಿಂದ ಸ್ಥಗಿತ ಗೊಳಿಸಲಾಗಿದೆ.**

ಸರಕು ಮತ್ತು ಸೇವಾ ಅಧಿನಿಯಮದಡಿ ವಿಲೀನಗೊಂಡ ತೆರಿಗೆಗಳಾದ ಕರ್ನಾಟಕ ಮೌಲ್ಯವರ್ಧಿತ ತೆರಿಗೆ, ಕೇಂದ್ರ ಮಾರಾಟ ತೆರಿಗೆ, ಕರ್ನಾಟಕ ವಿಲಾಸಿ ತೆರಿಗೆ, ಕರ್ನಾಟಕ ಮನರಂಜನಾ ತೆರಿಗೆ, ಜೂಜು ತೆರಿಗೆ, ಕರ್ನಾಟಕ ಪ್ರವೇಶ ತೆರಿಗೆಗಳ ಎಲ್ಲಾ ಮರುಪಾವತಿಗಳ ಕ್ಲೇಮ್‌ಗಳನ್ನು ಸಂಬಂಧಪಟ್ಟ ಕರನಿರ್ಧಾರಣಾಧಿಕಾರಿಗಳು ಪರಿಶೀಲಿಸಿ ಯುಕ್ತ ಪ್ರಕರಣಗಳಲ್ಲಿ ಮರುಪಾವತಿ ಆದೇಶವನ್ನು ಆಯಾ ಅಧಿನಿಯಮ, ನಿಯಮಾವಳಿ, ಅಧಿಸೂಚನೆ, ಸುತ್ತೋಲೆಗಳಲ್ಲಿರುವ ಉಪಬಂಧಗಳ ಅನ್ವಯ ಹೊರಡಿಸತಕ್ಕದ್ದು. ಆದೇಶ ಹೊರಡಿಸಿದ ಖಜಾನೆ-2ರಲ್ಲಿ (DDO ಆಗಿ) ಸಂಪರ್ಕ ಹೊಂದಿ ನಂತರ ಕರದಾತರ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ (ಉದಾಹರಣೆಗೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ನೀಡಲಾದ 11 ಅಂಕೆಗಳುಳ್ಳ Tax Identification Number - TIN) ಸದರಿ ನೋಂದಣಿ ಸಂಖ್ಯೆಯನ್ನು ಖಜಾನೆ-2 ವಾಣಿಜ್ಯ ತೆರಿಗೆ ಇಲಾಖೆಯ ಗಣಕೀಕೃತ ವ್ಯವಸ್ಥೆಯೊಂದಿಗೆ ಸಂಪರ್ಕ ಹೊಂದಿ ಆ ನೋಂದಣಿ ಸಂಖ್ಯೆಯ ಸಿಂಧುತ್ವ (Validity) ಯನ್ನು ಪರಿಶೀಲಿಸುತ್ತದೆ. ಸಿಂಧುತ್ವ ಪರಿಶೀಲನೆಯು ಯಶಸ್ವಿಯಾದಲ್ಲಿ ಯಾವ ಅಧಿನಿಯಮದಡಿ ಮರುಪಾವತಿ ನೀಡಲಾಗುತ್ತದೆಯೋ ಆ ಲೆಕ್ಕ ಶೀರ್ಷಿಕೆಯ ಖಜಾನೆ-2ರ ಪರದೆಯ ಮೇಲೆ ಅದನ್ನು ಆಯ್ಕೆ ಮಾಡಬೇಕು ಮತ್ತು ಮರುಪಾವತಿ ಮಾಡಿಸಬೇಕಾದ ಮೊತ್ತವನ್ನು ನಮೂದಿಸಿ ಕರದಾತರ ಬ್ಯಾಂಕ್ ಖಾತೆಯ ವಿವರಗಳನ್ನು (Account No., Bank, Branch, IFSC) ನಮೂದಿಸಿ ಮರುಪಾವತಿ ಪಡೆಯುವ ಕರದಾತರನ್ನು

ಫಲಾನುಭವಿಯ ಸ್ವೀಕೃತ ಎಂದು ಸೃಜಿಸತಕ್ಕದ್ದು. Digital Signature Certificate ಮೂಲಕ ಸಲ್ಲಿಸತಕ್ಕದ್ದು. ಈ ರೀತಿ ಸಲ್ಲಿಸಿದ ಮೊತ್ತವನ್ನು NEFT/RTGS ಮೂಲಕ ಕರದಾತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಆಗುತ್ತದೆ. ಜಮಾ ಆದ ಬಗ್ಗೆ DDO Login ನಲ್ಲಿ UTR (Unique Transaction Reference Number) ಲಭ್ಯವಿರುತ್ತದೆ.

ಈ ರೀತಿಯಾಗಿ ಇಲಾಖೆಯ ಎಲ್ಲಾ ಅಧಿಕಾರಿಗಳು (DDO ಗಳು) ಯಾವುದೇ ಅಧಿನಿಯಮದಡಿ ತೆರಿಗೆ ಹಿಂಪಾವತಿ ಮಾಡುವುದಿದ್ದಲ್ಲಿ ದಿನಾಂಕ: 25/10/2019ರ ನಂತರ ಖಜಾನೆ–2ರ ಮೂಲಕ ಆನ್‌ಲೈನ್‌ನಲ್ಲಿ ಕರದಾತರ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮೂಲಕ ಮಾತ್ರ ಮಾಡತಕ್ಕದ್ದು. ಯಾವುದೇ ಕಾರಣಕ್ಕೆ ಭೌತಿಕವಾಗಿ ಮರುಪಾವತಿ ಆದೇಶ ಮತ್ತು Payment Advice ಅಥವಾ Cheque ಗಳ ಮೂಲಕ ಏಜೆನ್ಸಿ ಬ್ಯಾಂಕ್‌ಗಳಿಗೆ ಕಳುಹಿಸಿ ಮರುಪಾವತಿ ಮಾಡತಕ್ಕದ್ದಲ್ಲ. ಮುಂದುವರೆದು, ವಿಭಾಗೀಯ ಜಂಟಿ ಆಯುಕ್ತರುಗಳು, ಅಪರ ಆಯುಕ್ತರು (ಜಾರಿ), ಜಾರಿ ವಿಭಾಗದ ಜಂಟಿ ಆಯುಕ್ತರುಗಳು ತಮ್ಮ ಅಧೀನ ಅಧೀನ ಅಧಿಕಾರಿಗಳ ಕಛೇರಿಗಳಲ್ಲಿರುವ ಮರುಪಾವತಿಗೆ ಸಂಬಂಧಪಟ್ಟ ಚೆಕ್ ಪುಸ್ತಕಗಳನ್ನು ಪರಿಶೀಲಿಸಿ ಅವುಗಳನ್ನು ಹಿಂಪಡೆದು ತಮ್ಮ ಸುಭದ್ರ ವಶದಲ್ಲಿಟ್ಟುಕೊಳ್ಳತಕ್ಕದ್ದು. ಈ ರೀತಿಯಾಗಿ, ಅಧೀನ ಅಧಿಕಾರಿಗಳಿಂದ ಹಿಂಪಡೆಯಲಾದ ಚೆಕ್‌ಗಳ ವಿವರ ಕುರಿತು ವರದಿಯೊಂದನ್ನು ದಿನಾಂಕ: 15/11/2019ರ ಒಳಗಾಗಿ ಈ ಕೆಳಕಂಡ ನಮೂನೆಯಲ್ಲಿ ಸಲ್ಲಿಸತಕ್ಕದ್ದು:

ಕ್ರಮ ಸಂಖ್ಯೆ	ವಿವರಗಳು	
1.	ಕಛೇರಿಯ ಹೆಸರು	
2.	ನೀಡಲಾದ ಚೆಕ್ ಸಂಖ್ಯೆ/ದಿನಾಂಕ	
3.	ಖಾಲಿ ಇರುವ ಚೆಕ್ ಸಂಖ್ಯೆ ಇಂದ ವರೆಗೆ	
4.	ಒಟ್ಟು ಚೆಕ್ ಪುಸ್ತಕಗಳು	
5.	ಹಿಂಪಡೆದ ದಿನಾಂಕ	

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು ಅಥವಾ ವಿಭಾಗೀಯ ಜಂಟಿ ಆಯುಕ್ತರುಗಳು ಪ್ರತಿ ತಿಂಗಳು ತಮ್ಮ ಅಧೀನ ಅಧಿಕಾರಿಗಳು ಮರುಪಾವತಿ ಮಾಡಿದ ವಿವರಗಳನ್ನು ಪರಿಶೀಲಿಸಿ ಆರ್ಥಿಕ ಸಂಹಿತೆಯ ಎಲ್ಲಾ ನಿಯಮಗಳ ಪರಿಪಾಲನೆಯ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

ಮೇಲಿನ ಸೂಚನೆಗಳನ್ನು ಎಲ್ಲಾ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

Office of the Commissioner of Commercial Taxes (K) ★ Bangalore-9 ★ Govt. of Karnataka

(ಶ್ರೀಕರ್ ಎಂ.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

ಇವರಿಗೆ:

ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ